Regd No B G. 155

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು- ಅಂಬಮನೆ ಸಿಂಸ್ಕೆದಾರ್ ಎಂ ಏ ಸುಬ್ಬರಾಯುರು

Sri

7—10—1964

[2 ನಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನ ಪೈ

Protect the Cow
ಗೋಸಂರಕ್ಷಣೆ ಮಾಡಿ

ಪೂರ್ಣ ಗುಣವಾಗದಿದ್ದಲ್ಲಿ ಹಣ ವಾಪಸ್

ಕೇವಲ 15 ದಿನಗಳಲ್ಲಿ ಪುರುಷರ ನಿತ್ಯಕ್ಕಿಗೆಖಾತ್ರಿಯಾದ ಯುವ್ವನದಲ್ಲಿಯೇ ಮುಪ್ಪಾದಂತೆ ಭಾಸವುವವರು ಮತ್ತು ಸಂಸಾರದಲ್ಲಿ ಜಿಗುಪ್ಸೆ ಹೊಂದಿದವರು ಇಂದೇ ಡಾ|| ಮೋತಿಯವರ ಸಲಹೆ ಪಡೆಯಿರಿ.

ಇವರು ನಂಗಳ ದೌರ್ಬಲ್ಯ, ಅತಿ ಮೂತ್ರ, ಸ್ವಪ್ನಾವಸ್ಥೆ, ಸ್ತ್ರೀಯಂ ಮುಕುಸಾತ್ರವದ ತೊಂದರೆ ಮತ್ತು ಇದೇ ರೀತಿಯ ಸಕಲ ಗುಪ್ತ ರೋಗಗಳನ್ನೂ ಗುಣಪಡಿಸುವರು.

ಜನತಾ ಡಿಸ್ಪೆನ್ಸರಿ

ಸಲಹೆ ಕಾಲ } ಬೆಳಿಗ್ಗೆ 10 ರಿಂದ 1
ಪ್ರತಿ ದಿನವೂ } ಸಂಜೆ 4 ರಿಂದ 8½

ಹೆಡ್ ಆಫೀಸ್ :
ಸುಬೇದಾರ್ ಛತ್ರಂ ರೋಡ್
ಬೆಂಗಳೂರು 9. ಫೋನ್ ನಂಬ್ರ 75332

ನವದೆಹಲಿ— ನ್ಯೂಯಾರ್ಕಿನ ವಿಶ್ವ ವೇದಲ್ಲಿ ಭಾರತದ ವಿಭಾಗದವರು ನಡೆಸಿದ ಅನುಸಂಧಾನದ ಪರಿಣಾಮವಾಗಿ ಭಾರತೀಯ ವಸ್ತುಗಳಿಗೆ ಅತ್ಯಧಿಕ ಬೇಡಿಕೆಗಳು ಬರತೊಡಗಿವೆ : ಬೊಂಬಾಯಿನ ಸಂಸ್ಥೆಯೊಂದಕ್ಕೆ 112 ಸಹಸ್ರ ಡಾಲರುಗಳಷ್ಟು ಮೌಲ್ಯದ ಭಾರತೀಯ ವಾದುಂಕ್ಗಳನ್ನು ಸಂಬರಾಜು ಮಾಡುವಂತೆ ಬೇಡಿಕೆ ಸಲ್ಲಿಸಲಾಗಿದೆ.

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನ ಮಹಾವಿದ್ವಾನ್. ಧರ್ಮಾಧಿಕಾರಿ
ದಾಸಂಕಾರ್ಯಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರಿಂದ

ಶ್ರೀ ಗುರುವಾರ ತದಿಗೆ ಸ್ವಾತಿ

ವಾರ್ತಾ ವಿಶೇಷಗಳು

ರಾಜಕೋಟೆ — ಕಾಂಡ್ಲಾ ರೇವಿಗೆ ಪೆಟ್ರೋಲು ಪದಾರ್ಥಗಳನ್ನು ವರ್ಷಕ್ಕೆ 125 ಹಡಗುಗಳು ತರುತ್ತಿವೆಯೆಂದೂ ಈ ಅಮದು 5 ಕಂಪೆನಿಗಳಿಂದ ಮಾಡಲಾಗುತ್ತಿದ್ದು, ಇದರಿಂದ ಭಾರತ ಸರಕಾರಕ್ಕೆ ಕಸ್ಟಂಸ್ ಅಬ್ಕಾರಿ ತೆರಿಗೆಗಳು ಪೋರ್ಟ್ ಟ್ರಸ್ಟ್ ಚಾರ್ಜು, ರೈಲ್ವೇ ಚಾರ್ಜು ಇತ್ಯಾದಿ ರೂ 300000000 ದೊರೆಯುವುದೆಂದೂ ಪ್ರಕಟವಾಗಿದೆ.

★

ತಿರುವೇಂದ್ರಂ — ಕೇರಳದ ದಂಗೆಗೋರ ಕಾಂಗ್ರೆಸಿಗರು 'ಕೇರಳ ಪೀಪಲ್ಸ್ ಕಾಂಗ್ರೆಸ್ಸು ಸಮುದಾಯಾಂತಾ ಸವಿತಿ' ಎಂಬ ಹೊಸ ಪಾರ್ಟಿ ಸ್ಥಾಪಿಸಿರುವರು

★

ನವದೆಹಲಿ— 'ಭಾರತ-ಪಾಕ್' ಮೈತ್ರಿಗಾಗಿ ವಿದ್ಯಾರ್ಥಿಗಳನ್ನು ಅದಲುಬದಲು ಮಾಡುವ ವಿಚಾರವು ತಿಕ್ಕಣಾ ಸಚಿವಾಲಯದ ಪರ್ಯಾಲೋಚನೆಯಲ್ಲಿರುವುದಾಗಿ ತಿಳಿದುಬಂದಿದೆ.

★

ನವದೆಹಲಿ— ಈ ವಾರಿಯ ವಾರ್ಲಿವೆಂಟಿನ ಎಂಡು ಸಭೆಗಳೂ ತಾ || 3 ರಿಂದು ಸಮಾಪ್ತಗೊಂಡಿತು : ಭಳಿಗಾಲದ ಅಧಿವೇಶನವು ನವೆಂಬರು 16 ರಿಂದ ಪ್ರಾರಂಭಗೊಳ್ಳುವುದು.

★

ವಿಶ್ವಸಂಸ್ಥೆ— ಬ್ರಿಟನ್ನು ಜಿಬ್ರಾಲ್ಟರ್ ರಿಂದ ಹೊಂಟುಹೋಗುವಂತೆ ರಷ್ಯಾ ಕೇಳಿದೆ

★

ಹೈದರಾಬಾದು— ಕೃಷ್ಣಾನದಿಯು ಪ್ರವಾಹವು ಇಳಿಯುತ್ತಿದೆ ; ಪ್ರವಾಹದ ಹಾವಳಿಯಿಂದ 40 ಗ್ರಾಮಗಳು ಪ್ರತ್ಯೇಕಿಸಲ್ಪಟ್ಟು 24 ಕೋಟಿ ರೂಗಳ ಬೆಳೆ ನಷ್ಟವಾಗಿದೆ

ವಿವಿಧ ವಿಷಯಗಳು

ನವದೆಹಲಿ— ಭಾರತ ಸರಕಾರವು ನೇಪಾಳ ಸರಕಾರಕ್ಕೆ ಒಂದು ಕೋಟಿ ರೂಗಳಷ್ಟು ಸಾಲವನ್ನು ಕೊಡುವುದು ; ನೇಪಾಳದಲ್ಲಿ ಸೆಣಬು ಸೀಮೆಂಟು ಕಾಗದಸ್ಯವಸ್ತ್ರ, ತಯಾರಿಕೆ ಕಾರ್ಖಾನೆಗಳನ್ನು ಸ್ಥಾಪಿಸಲು ಈ ಸಾಲ ಬಳಸಿಕೊಳ್ಳಲಾಗುವುದು.

★

ನವದೆಹಲಿ— ಇದೇ ವರ್ಷ ಜನವರಿ ತಿಂಗಳಿಂದೀಚೆಗೆ ಪೂರ್ವ ಪಾಕಿಸ್ತಾನದಿಂದ ಭಾರತಕ್ಕೆ ಬಂದಿರುವ ವಲಸೆಗಾರರ ಸಂಖ್ಯೆ 700358 ಸೆಪ್ಟಂಬರು 28 ರವರೆಗೆ.

★

ಮದರಾಸು— ಸ್ವೋನಿ ವಿವೇಕಾನಂದರ ಸ್ವಾಸ್ಥ್ಯವನ್ನು ಕನ್ಯಾಕುಮಾರಿಯಲ್ಲಿ ಸ್ಥಾಪಿಸಲು ಮದರಾಸು ಸರಕಾರವು ಅನುಜ್ಞೆ ಕೊಡಲು ನಿರ್ಧರಿಸಿದೆ.

★

ನವದೆಹಲಿ— ಕೇಂದ್ರ ಸರಕಾರದ ಸುದ್ದಿವಾಹಕ ಪ್ರಸಾರ ಮಂತ್ರಿ ಶಾಖೆಯು ಧಿ || ನೆಹರೂರನ್ನು ಕುರಿತ ಚಲಚಿತ್ರವೊಂದನ್ನು ತಯಾರಿಸಲು ಉದ್ದೇಶಿಸಿದೆ.

ದಿವ್ಯವಾಣಿ

ಪುಶ್ಪನಿಲ್ಲದವನ ವಚನವು ಶೂನ್ಯವು

ಪಡೆತನವು ಸರ್ವತ್ರ ಶೂನ್ಯವೆನಿಸಿದೆ.

ಒಳ್ಳೆಯ ಮಿತ್ರನಿಲ್ಲದವನ ಮನೆಯು ಶೂನ್ಯವು.

ನಗ್ನರಾದ ಕೃಷ್ಣಕರ ದೇಶದಲ್ಲಿ ಮಡಿವಾಳನು ಹೇಗೆ ವರ್ತಿಸಬಹುದು : ಏನು ಮಾಡಿಯಾನು ?

ಜ್ಞಾನದಿಂದ ಪರಿಣಮಿಸುವುದು ಒಂದು. ಅಜ್ಞಾನದಿಂದ ಪರಿಣಮಿಸುವುದು ಮತ್ತೊಂದು.

ನ್ಯಾಯವಾದ ಬೇಡಿಕೆ

ಅಖಿಲ ಭಾರತ ರೈಲ್ವೆ ಟ್ರಾಫಿಕ್ ಟ್ರೈನಿಂಗ್ ಸ್ಕಾಫಿನ ಸಂಮೇಳನದ ಸ್ವಾಗತ ಸಮಿತಿಯ ಸದಸ್ಯರಾದ ಶ್ರೀ ಪಿ ಎನ್ ನಾಡಗೌಡರು ನಿನ್ನೆ ಟೀ ಏರ್ಪಡಿಸಿದ್ದರು. ಗೃಹ ಮಂತ್ರಿ ಶ್ರೀ ಆರ್ ಎಂ ನಾಪಲಂ ಮುಖ್ಯ ಅತಿಥಿಗಳಾಗಿದ್ದರು. ಈ ಸಮ್ಮೇಳನದವರು ಬೇಡಿಕೆ ಕಾನೂನು ಹಾಗೂ ನ್ಯಾಯವಾದದ್ದಾದ್ದುದೆಂದು ಅವರು ತಿಳಿಸಿದರು.

★

ಹಿಂದೂ ಪ್ರಾಮಾಣೀಕತೆ

ಈಚೆಗೆ ಕಲ್ಕತ್ತಾ ಕ್ಯಾನಿಂಗು ರಸ್ತೆಯಲ್ಲಿನ ತನ್ನ ಕಚೇರಿಗೆ ಭವಾನಿಪುರದಿಂದ ಒಂದು ಟ್ಯಾಕ್ಸಿಯಲ್ಲಿ ಶ್ರೀ ಪರೇಶ್ ಎನ್ನುವರು ಹೋದರು ; ಟ್ಯಾಕ್ಸಿಯಿಂದ ಇಳಿದಾಗ ಒಬ್ಬ ಮಿತ್ರನೊಡನೆ ಮಾತನಾಡುತ್ತಾ ಹೊರಟುಹೋಗಿ ಟ್ಯಾಕ್ಸಿಯಲ್ಲಿಟ್ಟಿದ್ದ ಸೂಟ್‌ಕೇಸನ್ನು ತೆಗೆದುಕೊಳ್ಳುವುದನ್ನು ಮರೆತುಬಿಟ್ಟರು ; ಅವರ ವನಸ್ಸಿಗೆ ತುಂಬಾ ಒದ್ದಾಟವಾಯಿತು : ಆದರೆ ಒಂದು ಗಂಟೆಯನಂತರ ಟ್ಯಾಕ್ಸಿಡ್ರೈವರು ಬಿಲಿಯರ್ಡ್ಸಾಟದಿಂದ ಬಂದು ಅವರ ಸೂಟುಕೇಸನ್ನು ಅವರಿಗೆ ತಲಪಿಸಿದನು ; ಹಿಂದೂ ಪ್ರಾಮಾಣೀಕತೆ ಪ್ರಶಂಸನೀಯವು — ಆನರೆ ಬ್ರಿಟನ್ನಿನ ಪ್ರಾಮಾಣೀಕತೆ ನೋಡಿ ! ಒಂದು ವರ್ಷದಲ್ಲಿ ಇಂಗ್ಲೆಂಡಿನಲ್ಲಿ ಟೆಲಿಗ್ರಾಫು ಆಫೀಸುಗಳಲ್ಲಿ ಟೆಲಿಗ್ರಾಂ ಬರೆಯಲಿಟ್ಟ 10 ಎಂಲಿಯ ಪೆನ್ಸಿಲುಗಳೇ ಜಟ್ ಟ್ !

★

ಪೊನ್ನಂಪೇಟೆಯಲ್ಲಿ ಡಾ|| ಎಂ ಸಿ ಮೋದಿಯವರ ನೇತೃತ್ವದಲ್ಲಿ ಚಿಕಿತ್ಸಾ ಶಿಬಿರವನ್ನು ಗೃಹ ಮಂತ್ರಿ ಶ್ರೀ ಆರ್ ಎಂ ಪಾಟೀಲರು ಈ ದಿನ ನಿರ್ವಹಿಸಿದರು.

+

ವೈಸೂರು ದಸರಾ ಮಹೋತ್ಸವದಲ್ಲಿ ಭಾಗವಹಿಸಲು ವಿದ್ಯಾಮಂತ್ರಿಯವರಿಂದ ಐನೂರು ಮಂದಿ ಬಾಲಕರಿಗೆ ಮನವಿ ಬರಿದೆ

ದಸರಾ ಮನರಂಜನೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ

ತಾ || 8 ರಿಂದು ಟೌನ್‌ಹಾಲಿನಲ್ಲಿ 9 ರಿಂದ 12 ಮತ್ತು 3 ರಿಂದ 7 ರವರೆಗೂ, ಎಗ್ಮೊರಿನಲ್ಲಿ 5-30 ರಿಂದ 9 ರವರೆಗೂ, ಭಾವಗೀತೆ, ಸಂಗೀತ ಭಜನೆ, ನಾಗಸ್ವರ, ನಾಟಕ ಏರ್ಪಡಿಸಲಾಗಿದೆ.

ಶಾಸ್ತ್ರಗಳನ್ನು ಟೀಕಿಸುವುದು ಸರಿಯೇ ?

ಜ್ಞಾನಶಕ್ತಿ ಇಲ್ಲದುದರಿಂದಲೂ, ಪಾಪವೃದ್ಧಿಯಿಂದಲೂ ಈಗಿನವರಿಗೆ ಈ ಪ್ರಪಂಚದ ಪ್ರತಿಯೊಂದೂ ತನ್ನ ಅಧಿಕಾರಕ್ಕೊಂದಿ ಅದರಂತೆ ನಡೆಯುವುದೆಂದು ತಿಳಿದಿರುವುದು ಕಣ್ಣು ನೋಡಬಲ್ಲದು ಆದರೆ ಕೇಳಲಾರದು ; ಕಿವಿ ಕೇಳುತ್ತದೆ ಆದರೆ ನೋಡಲಾರದು ; ತಲೆಯು ಶರೀರದ ಪ್ರತಿಯೊಂದು ಅವಯವಕ್ಕೂ ಆಜ್ಞೆ ಮಾಡುತ್ತದೆ ; ಆದರೆ ಬಡವಾಯಿ ಕತ್ತು ಅದನ್ನು ಗುಲಾಮನಂತೆ ಹೊತ್ತುಕೊಂಡಿರಬೇಕಾಗಿದೆ ; ಬಾಯಿ ತಿನ್ನುತ್ತದೆ ; ಜಠರವು ಪಚನ ಮಾಡುತ್ತದೆ ; ಶರೀರವು ಈ ರೀತಿಯ ಅಧಿಪತ್ಯವನ್ನು ಎಂದಾದರೂ ವ್ಯತ್ಯಾಸಮಾಡಲು ಯತ್ನಿಸಿತ್ತದೆಯೇ ? ಅಧಿಕಾರ ವ್ಯತ್ಯಾಸ ಮಾಡುವುದೇ ಮನುಷ್ಯನು ಮಾಡಬಹುದಾದ ಪಾಪ ; ಇದನ್ನೇ ಭಗವಾನ್ ಶ್ರೀಕೃಷ್ಣನು ಗೀತೆಯಲ್ಲಿ ' ತನ್ನ ಧರ್ಮದಲ್ಲಿ ಏನೇ ಅವಗುಣಗಳಿದ್ದರೂ, ಉತ್ತಮವಾಗಿ ಕಾಣಬಹುದಾದ ಬೇರೆ ಧರ್ಮಕ್ಕಿಂತ ಶ್ರೇಯಸ್ಕರವು ; ಸ್ವಧರ್ಮದಲ್ಲಿ ಮರಣವುಂಟಾದರೂ ಶ್ರೇಯಸ್ಸುಂಟಾಗುತ್ತದೆ, ಪರಧರ್ಮದಲ್ಲಿ ಭಯವುಂಟಾಗುತ್ತದೆ ' ಎಂದು ಹೇಳಿದ್ದಾನೆ, ಅದರಿಂದ ಶಾಸ್ತ್ರಗಳು ಅಧಿಕಾರಕ್ಕೆ ಪ್ರಥಮ ಸ್ಥಾನವನ್ನು ಕೊಟ್ಟಿದೆ.

ಉಪನಿಷತ್ತುಗಳು ಹೀಗೆ ಹೇಳುತ್ತವೆ – ' ಎಲ್ಲಾ ಉಪನಿಷತ್ತುಗಳಲ್ಲೂ 108 ಪ್ರಾಮುಖ್ಯವಾದುದು ; ಒಂದಾವರ್ತಿ ಕೇಳುವುದರಿಂದ ಸಮಸ್ತ ಪಾಪಗಳೂ ಪರಿಹಾರವಾಗುತ್ತದೆ ' : ಆದರೆ ತಕ್ಷಣದಲ್ಲೇ ಆದೇ ಉಪನಿಷತ್ತುಗಳು ಈ ರೀತಿ ಹೇಳಿವೆ– ' ಈ ನೂರೆಂಟು ಉಪನಿಷತ್ತು ಯೋಗ್ಯತೆ ಇರುವ ಕೆಲವರಿಗಲ್ಲದೇ ಎಲ್ಲರಿಗೂ ಕೊಡಲೂಡದು : ನಾಸ್ತಿಕನಿಗೂ ಶ್ರುತಘ್ನನಿಗೂ ದುರಾಚಾರಿಗೂ ದೇವಂಲ್ಲಿ ಭಕ್ತಿಯಿಲ್ಲದವನಿಗೂ ಶಾಸ್ತ್ರ ವಿಷಯದಲ್ಲಿ ಸರಿಯಾದ ತಿಳುವಳಿಕೆಯಿಲ್ಲದವನಿಗೂ ಗುಂಭಕ್ತಿಯಿಲ್ಲದವನಿಗೂ ಖಂಡಿತ ಎಂದಿಗೂ ಕೊಡಕೂಡದು ' : ಆಂದರೆ ನೂರೆಂಟು ಉಪನಿಷತ್ತುಗಳನ್ನು ಒಂದಾವರ್ತಿ ಓದುವುದರಿಂದ ಸಮಸ್ತ ಪಾಪಗಳನ್ನೂ ಪರಿಹರಿಸಿಕೊಳ್ಳಬಹುದು : ಆದರೆ ಅಧಿಕಾರ ಹೊಂದುವವರೆಗೆ ಒದಲು ಅವಕಾಶವೇ ಇಲ್ಲ. [ಮುಂದುವರಿಯುವುದು]

Interpretation of Shastras ಎಂಬ ಗ್ರಂಥದಿಂದ ಸಂಗ್ರಹಿಸಲಾಗಿದೆ

ಅ. ನ. ಅಯ್ಯಂಗಾರ್, ಹೊಂಗನೂರು.

ಗೋರಕ್ಷಣೆ ಪ್ರಾಣದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ.

ಸಹಾಯಕರ ಹೆಸರನ್ನು ಪತ್ರಿಕೆಯಲ್ಲಿ ಕೃತಜ್ಞತಾಪೂರ್ವಕ ಪ್ರಕಟಿಸಲಾಗುತ್ತೆ.

ರೂ. 10 ಕ್ಕೆ ಮೇಲ್ಪಟ್ಟ ಕೊಟ್ಟವರಿಗೆ ' ಗೋರಕ್ಷಣ ' ಕಳುಹಿಸಲಾಗುತ್ತಿರುವುದು

ವಿಳಾಸ– ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

ಗೋರಕ್ಷಣಕ್ಕೆ ಚಂದಾ ಸಹಾಯದ್ರವ್ಯ ಮುಂತಾದ್ದನ್ನು ಸ್ವೀಕರಿಸುವವರು—
ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ್, ಜಯನಗರ, ಬೆಂಗಳೂರು
ಶ್ರೀ ಬಿ ಬಿ ಶಾಸ್ತ್ರಿಗಳು (ದ ಲೈಲ್ವೆ) ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ, ಹೊಂಗನೂರು
ಗೋರಕ್ಷಣ ಆಫೀಸು ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು 4

ವುಡ್‌ಲಾಂಡ್ ತೇಜಸ್ವಿ 4 ನೇ ವಾರ
ಶೋ ಸು
.... ಎ. ವಿ. ಎಂ. ರವರ ಅತ್ಯಮೋಘ ಹಿಂದಿ ಚಿತ್ರ ....

ಪೂಜಾ ಕೆ ಫೂಲ್
ತಾರಾಗಣ– ಅಶೋಕಕುಮಾರ್, ಮಾಲಾ ಸಿನ್ಹಾ, ನಿಮ್ಮಿ, ಧರ್ಮೇಂದ್ರ, ಪ್ರಾಣ್
[ದಿನವಹಿ 3 ಪ್ರದರ್ಶನಗಳು]

ಅಪೆರಾ— ಜನಪ್ರಿಯ 3 ನೇ ವಾರ
ಅತ್ಯಮೋಘ ಕನ್ನಡ ಚಿತ್ರ [ದಿನ 3 ಆಟಗಳು]

ಪೋಸ್ಟ್ ಮಾಸ್ಟರ್
ಲ ಯ
ಪಾತ್ರ– ವಂದನಾ, ಪಾಪಮ್ಮ, ಈಶ್ವರಪ್ಪ, ಶಿವರಾಜ್, ಶಿವಶಂಕರ್, ಬಾಲಕೃಷ್ಣ

ರಣಜಿತ್‌ನಲ್ಲಿ— 2–10–64 ರಿಂದ
ಗ ಅಮೋಘ ಪ್ರಾರಂಭ
– ಮನರಂಜಕ, ಬೋಧಪ್ರದ, ಆಕರ್ಷಣೀಯ ಕಾಟುಂಬಿಕ ಕನ್ನಡ ಚಿತ್ರ –
ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಕಲಾಕೃತಿ
ಮುರಿಯದ ಮನೆ [ಕನ್ನಡ]
ರಾಜಕುಮಾರ್, ಉದಯಕುಮಾರ್, ಅಶ್ವತ್ಥ್, ಬಾಲಕೃಷ್ಣ, ನರಸಿಂಹರಾಜು
ಪಂಡರೀಬಾಯಿ, ಜಯಂತಿ ಮುಂತಾದವರು ಪಾತ್ರಧಾರಿಗಳು
ನಿರ್ದೇಶನ : ವೈ. ಆರ್. ಸ್ವಾಮಿ, ಎಂ. ಎ.
4 ಪ್ರಾಂಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ರದ್ದು ಮಾಡಿದೆ
ಪ್ರತಿ ದಿನ 3 ಆಟಗಳು — ಕರ್ನಾಟಕ ಫಿಲ್ಮ್ಸ್ ಹಂಚಿಕೆ

SHAKTI
SUDHA

Superb Tonic

Help The ' Gorakshana'
" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ
ವಾರ್ಷಿಕ ಚಂದಾ 50 ನ ಪೈ
' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4